ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ : **34/2024**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಚಂದ್ಯಾ ನಾಯ್ಕ | ಸಿ.ಡಬ್ಲ್ಯು | 1 |
| ತಂದೆಯ ಹೆಸರು | ಃ ಜಾತ್ರಾ ನಾಯ್ಕ | ಪಿ.ಡಬ್ಲ್ಯು | 1 |
| ವಯಸ್ಸು | ಃ 72 ವರ್ಷ | | |
| ಉದ್ಯೋಗ | ಃ ನಿವೃತ್ತ ಶಿಕ್ಷಕರು | | |
| ವಾಸ ಸ್ಥಳ | ಃ ತರೀಕೆರೆ | | |

ದಿನಾಂಕಃ **18-03-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ-2 ಮತ್ತು 3 ರವರ ಪರಿಚಯ ಇದೆ. ದಿನಾಂಕ 23-09-2023 ರಂದು ನಾನು ನನ್ನ ಹೆಂಡತಿ ನನ್ನ ಮಗಳ ಮನೆಗೆ ಹೊಸದುರ್ಗಕ್ಕೆ ಹೋಗಿದ್ದೆವು. ಹೋಗುವ ಕಾಲಕ್ಕೆ ಮನೆಗೆ ಬೀಗ ಮತ್ತು ಗೇಟಿಗೆ ಕೂಡಾ ಬೀಗ ಹಾಕಿಕೊಂಡು ಹೋಗಿದ್ದೆವು. 25-09-2023 ರಂದು ಮಗಳ ಮನೆಯಿಂದ ಬೆಳಗ್ಗೆ 11 ಗಂಟೆಗೆ ವಾಪಸ್ಸು ಬಂದೆವು. ಗೇಟಿನ ಬೀಗ ಮುಗಿದು ಹೋಗಿತ್ತು ಮತ್ತು ಕಾಂಪೌಂಡನಲ್ಲಿ ಕಾರು ಇರಲಿಲ್ಲ. ಕಾರಿನ ನಂಬರ ಕೆಎ 51 ಎಂ ಎಲ್ 0835 ಇರುತ್ತದೆ. ಮನೆಯ ಬಾಗಿಲು ನೋಡಿದಾಗ ಬಾಗಿಲಿನ ಇಂಟರ್ ಲಾಕ್ ಕೂಡಾ ಮುರಿದು ಹೋಗಿತ್ತು. ಹಾಲ್‌ನಲ್ಲಿ ಎಲ್ಲಾ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು, ಗಾಡ್ರೇಜ್ ಓಪನ್ ಆಗಿತ್ತು. ಅದರಲ್ಲಿ ಇಟ್ಟಿದ್ದ 50000/- ನಗದು, ಎರಡು ಬಂಗಾರದ ಉಂಗುರ, ಕಾಲು ಚೈನು, ಒಂದು ಬೆಳ್ಳಿ ಸರ, ಒಂದು ಬೆಳ್ಳಿಯ ಕಾಯಿನ್ ಮತ್ತು 7 ರೇಷ್ಮೆ ಸಿರಿಗಳು ಮತ್ತು ನನ್ನ ಕೆಲವು ಹೊಸ ಬಟ್ಟೆಗಳು ಕಳುವಾಗಿದ್ದವು. ನಾನು ಪೊಲೀಸರಿಗೆ ದೂರು ಕೊಟ್ಟೆನು. ದೂರನ್ನು ನಿಪಿ.1 ಮತ್ತು ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಅದೇ ದಿವಸ ಮಧ್ಯಾಹ್ನ 3 ಗಂಟೆಗೆ ಪೊಲೀಸರು ಪಂಚನಾಮೆ ಮಾಡಲು ಬಂದಿದ್ದರು. 3-4 ಗಂಟೆಯ ಮಧ್ಯೆದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಚನಾಮೆ ಜರುಗಿಸಿದ್ದಾರೆ. ಪಂಚನಾಮೆಯನ್ನು ನಿಪಿ.2, ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಭಾವಚಿತ್ರಗಳನ್ನು ನಿಪಿ.3 ರಿಂದ 7 ಎಂದು ಗುರುತಿಸಲಾಯಿತು. ಕಳ್ಳತವಾದ ವಸ್ತುಗಳ ಪೈಕಿ ಕಾರು, ಎರಡು ಬಂಗಾರದ ಉಂಗುರು, ಬೆಳ್ಳಿ ಚೈನು, ಬೆಳ್ಳಿ ಸರ ಮತ್ತು ಬೆಳ್ಳಿಯ ಕಾಯಿನ್ ಸಿಕ್ಕಿವೆ. ಕಾರನ್ನು ನಾನು ಉಡುಪಿಯ ಪೊಲೀಸ್ ಠಾಣೆಯಿಂದ ಬಿಡಿಸಿಕೊಂಡಿದ್ದೇನೆ. ಅವರೇ ನನಗೆ ಫೋನ್ ಮಾಡಿದ್ದರು. ಕಳ್ಳತನ ಆದ ಒಂದು ತಿಂಗಳಿಗೆ ನನಗೆ ಫೋನ್ ಕರೆ ಬಂದಿತು. ಉಳಿದ ವಸ್ತುಗಳನ್ನು ಈ ನ್ಯಾಯಾಲಯದಿಂದ ಬಿಡಿಸಿಕೊಂಡಿದ್ದೇನೆ. ಒಡವೆಗಳನ್ನು ಬಿಡಿಸಿಕೊಳ್ಳುವ ಕಾಲಕ್ಕೆ ತೆಗೆದ ಫೋಟೊಗಳನ್ನು ನಿಪಿ.8 ರಿಂದ 10 ಎಂದು ಗುರುತಿಸಲಾಯಿತು. ಸದರಿ ವಸ್ತುಗಳು ಈಗಲೂ ನನ್ನ ಬಳಿ ಇವೆ ಬೇಕು ಎಂದಾದರೆ

ಹಾಜರುಪಡಿಸುತ್ತೇನೆ. ಕಲ್ಕೆರೆ ಮಂಜಾ ಎಂಬ ವ್ಯಕ್ತಿ ಕಳುವು ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ ಮತ್ತು ಪೊಲೀಸ್ ಠಾಣೆಯಲ್ಲಿ ತೋರಿಸಿದ್ದಾರೆ. ವಿಡಿಯೋ ಕಾಲ್‌ನಲ್ಲಿ ಕಾಣಿಸುವ ವ್ಯಕ್ತಿಯನ್ನು ಪೊಲೀಸರು ನನಗೆ ತೋರಿಸಿದ್ದಾರೆ. ಕಾರನ್ನು ಬಿಡಿಸಿಕೊಳ್ಳುವಾಗ ನಂಬರ ಪ್ಲೇಟ್ ಬದಲಿ ಮಾಡಲಾಗಿದೆ . ಚಾಸಿ ಮತ್ತು ಇಂಜೀನ್ ನಂಬರ ಸಹಾಯದಿಂದ ಕಾರನ್ನು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಒಡೆದ ಬೀಗಗಳನ್ನು ಪೊಲೀಸರಿಗೆ ಕೊಟ್ಟಿಲ್ಲ. ಆರೋಪಿಯನ್ನು ಪೊಲೀಸರು ತೋರಿಸಿದಕ್ಕೆ ನನಗೆ ಗೊತ್ತಾಗಿದೆ ಎಂದರೆ ಸರಿ, ಪೊಲೀಸರು ನನಗೆ ಯಾವುದೇ ವ್ಯಕ್ತಿಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಕಂಪನಿಯ ಕೀ ಇಲ್ಲದೇ ಕಾರುಗಳನ್ನು ಸ್ಟಾರ್ಟ್ ಮಾಡಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಗಾಡ್ರೇಜ್‌ನಲ್ಲಿ ಇದ್ದ ಬೀಗಗಳ ಸಹಾಯದಿಂದ ಗಾಡಿ ಶುರು ಮಾಡಿರಬಹುದು ಎಂದು ಹೇಳುತ್ತಾರೆ. ಒಂದು ಕೀಲಿಯನ್ನು ಉಪುಪಿಯ ಪೊಲೀಸರು ನನಗೆ ಕೊಟ್ಟಿದ್ದಾರೆ. ಆರೋಪಿ ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಕಳವು ಮಾಡಿಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಬೇರೆ ಯಾರೋ ಮಾಡಿರುವ ಕಳ್ಳತನದ ಆರೋಪವನ್ನು ಆರೋಪಿಯ ಮೇಲೆ ಹೊರಿಸಲಾಗಿದೆ ಎಂದರೆ ಸರಿಯಲ್ಲ. ನನಗೆ ಪೊಲೀಸರು ಕೊಟ್ಟಿರುವ ಒಡವೆಗಳು ನಮ್ಮ ಮನೆಯಲ್ಲಿ ಕಳ್ಳತನವಾಗಿರುವುದಿಲ್ಲ ಮತ್ತು ಅವು ನನಗೆ ಸೇರಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ, ನಾನು ಹೇಳಿರುವ ಆಭರಣಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿ ಕೊಟ್ಟ ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸ್ಥಳ ಮತ್ತು ಅಮಾನತು ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***